ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ,
ಬಾಗಲಕೋಟ

ರಾಕೃವಿಯೊ ಪ್ರಾಯೋಜಿತ
ತೋಟಗಾರಿಕಾ ವ್ಯವಹಾರ ಹಾಗೂ ರಫ್ತು ಜ್ಞಾನ ಕೇಂದ್ರ

# ಕೃಷಿ ಮಾರಾಟದ ಟೆಂಡರ್ ವ್ಯವಸ್ಥೆಯಲ್ಲಿ ಗಣಕೀಕರಣ – ರೈತರಿಗೆ ಮಾಹಿತಿ


ಸಂಗ್ರಹಣೆ :

ಡಾ॥ ಎಂ. ಅರುಣ್ | ಡಾ॥ ಸಿ. ಜೆ. ಯಾದವ
ಡಾ॥ ತನ್ವೀರ್ ಅಹ್ಮದ | ಡಾ॥ ಸಚಿನ್ ನಂದಿಮಠ






ಪ್ರಕಟಣೆ :

ತೋಟಗಾರಿಕಾ ವ್ಯವಹಾರ ಹಾಗೂ ರಫ್ತು ಜ್ಞಾನ ಕೇಂದ್ರ,
ತೋ.ವಿ.ವಿ. ಬಾಗಲಕೋಟ

ಇತ್ತೀಚಿನ ದಿನಗಳಲ್ಲಿ ವ್ಯಾಪಾರ ವಹಿವಾಟಿನಲ್ಲಿ ಕಾಣುತ್ತಿರುವ ಬದಲಾವಣೆಗಳು ಉತ್ಪಾದಕರಿಗೆ ಸಾಕಷ್ಟು ಆಶಾದಾಯಕವಾಗಿರುವುದು ನಿಜವಾಗಿದೆ. ಮಾರಾಟ ವ್ಯವಸ್ಥೆಯಲ್ಲಿ ಅಂತರ್ಜಾಲವು ದೊಡ್ಡ ಮಟ್ಟದ ಏರಿಕೆಯನ್ನು ತರುವುದರಲ್ಲಿ ಮಹತ್ತರವಾದ ಪಾತ್ರವಹಿಸುತ್ತಿದೆ. ಇದು ಉತ್ಪಾದನಾ ರಂಗದಲ್ಲಿರುವ ಉತ್ಪನ್ನಗಳ ಮಟ್ಟಿಗೆ ನಿಜವಾದರೂ, ಕೃಷಿ ಉತ್ಪನ್ನಗಳಿಗೆ ವ್ಯಾಪಕವಾದ ಅನುಕೂಲವಂತೂ ಆಗಿಲ್ಲ. ಗ್ರಾಹಕರಿಗೆ ಅಗತ್ಯವಾದ ಹಣ್ಣು, ತರಕಾರಿ ಹಾಗೂ ದಿನಸಿ ವಸ್ತುಗಳನ್ನು ವಿತರಿಸುವ ಸುಮಾರು ಹತ್ತು ಖಾಸಗಿ ವೆಬ್‌ಸೈಟ್‌ಗಳು ಬೆಂಗಳೂರು ನಗರ ಸೇರಿದಂತೆ ದೇಶದ ಹಲವಾರು ನಗರಗಳಲ್ಲಿ ಕಾರ್ಯೋನ್ಮುಖವಾಗಿದ್ದರೂ ಅದರ ವ್ಯಾಪಕತೆಯ ಕೊರತೆ ಕಾಣುತ್ತಿದೆ.

ಆನ್‌ಲೈನ್ ವ್ಯವಸ್ಥೆ ಅತ್ಯಂತ ವ್ಯವಸ್ಥಿತ ಹಾಗೂ ದಕ್ಷ ವ್ಯವಸ್ಥೆಯಾಗಿದೆ. ಇಲ್ಲಿ ಅನಗತ್ಯ ಮಧ್ಯವರ್ತಿಗಳ ಕಾಟವಿಲ್ಲ, ವರ್ತಕರಿಗೆ ತಗಲುವ ಮಾರಾಟದ ಅಧಿಕ ವೆಚ್ಚವು ಕಡಿತಗೊಂಡು ಗ್ರಾಹಕನಿಗೆ ಕಡಿಮೆ ದರದಲ್ಲಿ ವಸ್ತುಗಳು ಸಿಗುವುದರೊಂದಿಗೆ, ಉತ್ಪಾದಕರಿಗೂ ಗ್ರಾಹಕನು ಕೊಡುವ ಹಣದಲ್ಲಿ ಹೆಚ್ಚಿನ ಪಾಲು ದಕ್ಕುತ್ತದೆ. ಪ್ರತಿಯೊಂದರಲ್ಲೂ ಕ್ಷಮತೆಯನ್ನು ಅಪೇಕ್ಷಿಸುವ ಈ ಕಾಲದಲ್ಲಿ ಆನ್‌ಲೈನ್ ವ್ಯವಸ್ಥೆ ಅತ್ಯಂತ ಪ್ರಯೋಜನಕಾರಿಯಾಗುವುದು ನಿಸ್ಸಂಶಯವಾಗಿದೆ.

ಇದೇನೇ ಆದರೂ, ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಗೆ ವ್ಯಾಪಕ ಬದಲಾವಣೆ ದೊರೆಯದಿರುವುದು ನಿಜವಾಗಿ ಚಿಂತಾಜನಕವಾಗಿದೆ. 2003ನೇ ಇಸವಿಯಲ್ಲಿ ಕೃಷಿ ಮಾರಾಟ ಕಾನೂನಿನಲ್ಲಿ ಬದಲಾವಣೆ ತಂದು ಒಪ್ಪಂದ ಕೃಷಿ, ಖಾಸಗಿ ಮಾರುಕಟ್ಟೆ, ಆಧುನಿಕ ಚಿಲ್ಲರೆ ಮಾರಾಟಗಾರರಿಗೆ ನೇರ ಖರೀದಿಗೆ ಪರವಾನಗಿ ಇತ್ಯಾದಿ ಬದಲಾವಣೆ ತಂದು ರೈತರಿಗೆ ಅನುಕೂಲ ಕಲ್ಪಿಸುವ ಪ್ರಯತ್ನ ನಡೆದಿದ್ದರೂ ಇದು ಕೆಲವೇ ರೈತರಿಗೆ ಅಥವಾ ಕೆಲವೇ ಉತ್ಪನ್ನಗಳಿಗೆ ಸೀಮಿತವಾಗಿದೆ. ಕರ್ನಾಟಕ ರಾಜ್ಯದಲ್ಲಿ, ದೇಶದಲ್ಲೇ ಪ್ರಪ್ರಥವಾಗಿ ಅನುಷ್ಠಾನಗೊಳಿಸಿರುವ ಇ-ಟೆಂಡರ್ ವ್ಯವಸ್ಥೆಗೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದ್ದು ನೆರೆ ರಾಜ್ಯವಾದ ಆಂಧ್ರಪ್ರದೇಶ ಮತ್ತು ತಮಿಳನಾಡಿನಲ್ಲಿ ಇದನ್ನು ಅಳವಡಿಸಿಕೊಳ್ಳುವ ಪ್ರಯತ್ನಗಳು ನಡೆದಿವೆ. ನಮ್ಮ ರಾಜ್ಯವು ಇಂತಹ ಮಹತ್ತರವಾದ ಬೆಳವಣಿಗೆಗೆ ನಾಂದಿಯಾಗಿರುವುದು ನಿಜವಾಗಿಯೂ ಶ್ಲಾಘನೀಯ.
ಇದಕ್ಕೆ ಕುರಿತಂತೆ ಸಂಬಂಧ ಪಟ್ಟ ಇಲಾಖೆ ಮತ್ತು ಮಂಡಳಿಯವರ ಪರಿಶ್ರಮದ ಫಲ ಮೆಚ್ಚುಗೆಗೆ ಅರ್ಹವಾಗಿದೆ.

ಆದರೆ ಇಲ್ಲಿಗೆ ಎಲ್ಲ ಮುಗಿಯಲಿಲ್ಲ! ಈ ವ್ಯವಸ್ಥೆಯಲ್ಲಿಯೂ ಕೆಲವು ಸಣ್ಣ, ದೊಡ್ಡ ಲೋಪದೋಷಗಳು ಉಳಿದುಹೋಗಿವೆ. ಈ ಉಳಿದು ಹೋಗಿರುವ ದೋಷಗಳು, ದಲ್ಲಾಳಿ ಹಾಗು ವರ್ತಕರು ಈ ಹೊಸ ವ್ಯವಸ್ಥೆಯನ್ನು ರೈತರಿಗೆ ಮಾರಕವಾಗಿಸಬಲ್ಲ ಹಲವು ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಏನಿದು ಇ-ಟೆಂಡರ್ ವ್ಯವಸ್ಥೆ? ಇದು ಹೇಗೆ ಅನುಕೂಲಕಾರಿ? ಇದರಲ್ಲಿ ಉಳಿದುಕೊಂಡಿರುವ ಲೋಪದೋಷಗಳೇನು? ಇಲ್ಲಿ ತಿಳಿದುಕೊಳ್ಳುವ ಪ್ರಯತ್ನ ಮಾಡಬಹುದು.

ಕೃಷಿ ಉತ್ಪನ್ನಗಳನ್ನು ಪ್ರಸ್ತುತ ಕಾನೂನಿನಂತೆ, ರೈತರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ.) ಗಳಲ್ಲಿ ಪರವಾನಿಗೆ ಹೊಂದಿದ ದಲ್ಲಾಳಿಗಳ ಮೂಲಕ ಮಾರಾಟ ಮಾಡಬಹುದಾಗಿದೆ. ಈ ಮಾರಾಟವು ಎರಡು ರೀತಿಯಲ್ಲಿ ನಡೆಯುತ್ತದೆ. ಬಹುತೇಕ ಬೇಗ ಹಾಳಾಗಬಹುದಾದ ಹಣ್ಣು ಮತ್ತು ತರಕಾರಿಗಳನ್ನು ಹರಾಜು (ಓಪನ್ ಆಕ್ಷನ್) ಮೂಲಕವೂ, ಧಾನ್ಯ, ಎಣ್ಣೆಕಾಳು ಹಾಗೂ ಹೊಲದ ಬೆಳೆಗಳಿಗೆ (ಕ್ಲೋಸಡ್) ಟೆಂಡರ್ (ಚೀಟಿಯಲ್ಲಿ ಬೆಲೆ ನಮೂದಿಸಿ ಗೌಪ್ಯತೆಯಿಂದ ಎ.ಪಿ.ಎಂ.ಸಿ.ಯಲ್ಲಿಟ್ಟಿರುವ ಡಬ್ಬಿಗಳಲ್ಲಿ ಹಾಕುವ) ಮೂಲಕವೂ ವರ್ತಕರು ತಮ್ಮ ಬೆಲೆಯನ್ನು ವ್ಯಕ್ತಪಡಿಸಬಹುದಾಗಿದೆ. ಮೊದಲನೇ ವ್ಯವಸ್ಥೆಯಲ್ಲಿ ಒಬ್ಬರು ಕೂಗಿದ ಬೆಲೆ ಇನ್ನೊಬ್ಬರಿಗೆ ಗೊತ್ತಾಗುವುದರಿಂದ ಸ್ಪರ್ಧಾತ್ಮಕತೆ ಉಂಟಾಗುತ್ತದೆ ಆದರೆ ಬೆಲೆಯಲ್ಲಿನ ಹೆಚ್ಚಳವು ಸೀಮಿತವಾಗಿರುತ್ತದೆ. ಟೆಂಡರ್ ವ್ಯವಸ್ಥೆಯಲ್ಲಿ ಒಬ್ಬ ವರ್ತಕನು ನಮೂದಿಸುವ ಬೆಲೆಯು ಮತ್ತೊಬ್ಬರಿಗೆ ತಿಳಿಯದಿರುವುದರಿಂದ ಹೆಚ್ಚು ಬೆಲೆಗೆ ಮಾರಾಟವಾಗುವ ಅವಕಾಶವೂ ಇರುತ್ತದೆ. ಎರಡನೇ ವ್ಯವಸ್ಥೆಗೆ ಕೊಂಚ ಮಾರ್ಪಾಟು ತಂದು, ಐಟಿ ಸ್ಪರ್ಶ ನೀಡಿ, ಇ-ಟೆಂಡರ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಸದರಿ ವ್ಯವಸ್ಥೆಯು, ರಾಜ್ಯದ ಬಹುತೇಕ ಎಲ್ಲ ಜಿಲ್ಲಾ ಕೇಂದ್ರದಲ್ಲಿರುವ ಎ.ಪಿ.ಎಂ.ಸಿ.ಗಳಲ್ಲಿ(ಕೋಲಾರ, ಚಿಕ್ಕಮಗಳೂರು, ಹಾಸನ ಹೊರತುಪಡಿಸಿ) ಜಾರಿಯಲ್ಲಿರುತ್ತದೆ. ಇವಲ್ಲದೆ ಏಕ ಉತ್ಪನ್ನ ದೊಡ್ಡ ಮಾರುಕಟ್ಟೆಗಳು (ತಿಪಟೂರು, ಭೀಮಸಮುದ್ರ, ಬ್ಯಾಡಗಿ ಇತ್ಯಾದಿ) ಇರುವ ಕೆಲವು ಜಿಲ್ಲೆಗಳಲ್ಲಿ ಒಂದಕ್ಕಿಂತ ಹೆಚ್ಚು ಮಾರುಕಟ್ಟೆಗಳಲ್ಲಿ ಇ-ಟೆಂಡರ್ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಹೆಗ್ಗಳಿಕೆ ಸಂಬಂಧಪಟ್ಟ ಇ[illegible] ಅನುಷ್ಠಾನಗೊಳಿಸಿರುವ ಮಾರುಕಟ್ಟೆ ಮತ್ತು ಉತ್ಪನ್ನಗಳ ವಿವರಗಳು ಇಂತಿವೆ:

| ಕ್ರ.ಸಂ. | ಮಾರುಕಟ್ಟೆ | ಉತ್ಪನ್ನ |
|---|---|---|
| 1 | ಬಿಜಾಪುರ | ತೊಗರಿ, ಜೋಳ, ಕಡಲೆ, ಹತ್ತಿ |
| 2 | ಗಂಗಾವತಿ | ಸೂರ್ಯಕಾಂತಿ, ಸಜ್ಜೆ, ನವಣೆ |
| 3 | ತುಮಕೂರು | ಅಡಿಕೆ, ಶೇಂಗ, ಹುಣಸೆ, ಸೀಗೆ |
| 4 | ಯಾದಗಿರಿ | ಶೇಂಗ, ತೊಗರಿ, ಕಡಲೆ, ಸೂರ್ಯಕಾಂತಿ, ಹೆಸರು |

| | | |
|---|---|---|
| 5 | ಬ್ಯಾಡಗಿ | ಒಣಮೆಣಸು |
| 6 | ಬಾಗಲಕೋಟ | ಸೂರ್ಯಕಾಂತಿ, ಶೇಂಗ, ಹೆಸರು |
| 7 | ಶಿರಸಿ | ಅಡಿಕೆ |
| 8 | ಹುಬ್ಬಳ್ಳಿ | ಹತ್ತಿ, ಆಹಾರಧಾನ್ಯಗಳು |
| 9 | ಬೆಳ್ಳಾರಿ | ಹತ್ತಿ |
| 10 | ಶಿವಮೊಗ್ಗ | ಅಡಿಕೆ, ಹತ್ತಿ, ಒಣಮೆಣಸು |
| 11 | ಸಾಗರ | ಅಡಿಕೆ, ಕಾಳುಮೆಣಸು |
| 12 | ಹಾವೇರಿ | ಹತ್ತಿ |
| 13 | ಗುಲ್ಬರ್ಗಾ | ತೊಗರಿ, ಹೆಸರು |
| 14 | ಕೊಟ್ಟೂರು | ಮೆಕ್ಕೆಜೋಳ |
| 15 | ಕುಮಟ | ಅಡಿಕೆ |
| 16 | ರಾಣೆಬೆನ್ನೂರು | ಹತ್ತಿ, ಶೇಂಗ |
| 17 | ಚಿತ್ರದುರ್ಗ | ಕಡಲೆ, ಹೆಸರು, ಸೂರ್ಯಕಾಂತಿ, ಜೋಳ |
| 18 | ಬೈಲಹೊಂಗಲ | ಹತ್ತಿ, ಶೇಂಗ |
| 19 | ಸವದತ್ತಿ | ಹತ್ತಿ, ಶೇಂಗ |
| 20 | ಭೀಮಸಮುದ್ರ | ಅಡಿಕೆ |
| 21 | ಹೊಸದುರ್ಗ | ಉರುಳಿ, ಎಳ್ಳು, ನವಣೆ |
| 22 | ಸುರಪುರ | ಹತ್ತಿ, ಹೆಸರು, ಶೇಂಗ, ಸೂರ್ಯಕಾಂತಿ, ತೊಗರಿ |
| 23 | ಸಿದ್ದಾಪುರ | ಅಡಿಕೆ, ಕಾಳುಮೆಣಸು |
| 24 | ಕೊಪ್ಪಳ | ಮೆಕ್ಕೆಜೋಳ, ಶೇಂಗ |
| 25 | ಭದ್ರಾವತಿ | ಅಡಿಕೆ |
| 26 | ಚನ್ನಗಿರಿ | ಅಡಿಕೆ |
| 27 | ಚಳ್ಳಕೆರೆ | ಜೋಳ, ಶೇಂಗ, ಸೂರ್ಯಕಾಂತಿ |
| 28 | ಮಂಡ್ಯ | ಬೆಲ್ಲ |
| 29 | ತಿಪಟೂರು | ಒಣಕೊಬ್ಬರಿ |
| 30 | ಅರಸೀಕೆರೆ | ತೆಂಗು, ಒಣಕೊಬ್ಬರಿ, ಹತ್ತಿ, ಎಳ್ಳು |
| 31 | ಧಾರವಾಡ | ಶೇಂಗ, ಹತ್ತಿ |
| 32 | ಗದಗ | ಶೇಂಗ, ಹೆಸರು, ಜೋಳ, ಗೋಧಿ |
| 33 | ಬೀದರ್ | ತೊಗರಿ, ಕಡಲೆ |
| 34 | ರಾಮದುರ್ಗ | ಶೇಂಗ, ಹತ್ತಿ |
| 35 | ಯಲ್ಲಾಪುರ | ಅಡಿಕೆ, ಕಾಳುಮೆಣಸು |
| 36 | ಶಹಪುರ | ಉರುಳಿ, ಹೆಸರು, ಶೇಂಗ |
| 37 | ಲಕ್ಷ್ಮೇಶ್ವರ | ಶೇಂಗ |
| 38 | ಸುಳ್ಯ | ಅಡಿಕೆ |
| 39 | ಮೈಸೂರು | ಆಹಾರ ಧಾನ್ಯಗಳು, ಎಣ್ಣೆಕಾಳು (11 ಉತ್ಪನ್ನಗಳು) |
| 40 | ದಾವಣಗೆರೆ | ಶೇಂಗ, ಸೂರ್ಯಕಾಂತಿ, ಹತ್ತಿ |
| 41 | ರಾಯಚೂರು | ಹತ್ತಿ, ಶೇಂಗ ಸೇರಿದಂತೆ 10 ಉತ್ಪನ್ನಗಳು |

ಇದರಲ್ಲಿ ವರ್ತಕರು ಚೀಟಿಗಳಲ್ಲಿ ಬೆಲೆ ನಮೂದಿಸಿ ಡಬ್ಬಗಳಲ್ಲಿ ಹಾಕುವುದರ ಬದಲಾಗಿ ಎ.ಪಿ.ಎಂ.ಸಿ. ಯಲ್ಲಿ ಅಳವಡಿಸಲಾಗಿರುವ (ಅಥವಾ ತಮ್ಮದೇ ಕಛೇರಿಗಳಲ್ಲಿರುವ) ಕಂಪ್ಯೂಟರ್‌ನಲ್ಲಿ ಸಂಬಂಧಪಟ್ಟ ಅಂತರ್ಜಾಲ ತಾಣ (ವೆಬ್‌ಸೈಟ್)ನಲ್ಲಿ ರೈತರ ಉತ್ಪನ್ನಗಳಿಗೆ ಬೆಲೆ ನಮೂದಿಸಬಹುದಾಗಿದೆ. ಇಲ್ಲಿ ಅತ್ಯಂತ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ರೈತರಿಗೆ ಕಂಪ್ಯೂಟರ್ ಬಳಕೆಯ ಜ್ಞಾನದ ಅವಶ್ಯಕತೆಯಿರುವುದಿಲ್ಲ. ಹಾಗಾಗಿ ಅನಕ್ಷರಸ್ಥ ರೈತರೂ ಸಹ ಇ–ಟೆಂಡರ್ ವ್ಯವಸ್ಥೆಯ ಲಾಭ ಪಡೆದುಕೊಳ್ಳಬಹುದಾಗಿದೆ ಮತ್ತು ಅವರಿಗೆ ಈ ವ್ಯವಸ್ಥೆಯಿಂದ ಯಾವ ರೀತಿಯಲ್ಲಿಯೂ ಮೋಸವಾಗುವ ಸಾಧ್ಯತೆ ತೀರಾ ಕಡಿಮೆ ಇರುತ್ತದೆ.

ಈ ವ್ಯವಸ್ಥೆಯಿಂದ ಕೃಷಿ ಮಾರಾಟ ವ್ಯವಸ್ಥೆಯಲ್ಲಿರುವ ಬಹುತೇಕ ಎಲ್ಲರಿಗೂ ಅನುಕೂಲಗಳಾಗಿವೆ. ರೈತ, ದಲ್ಲಾಳಿ, ವರ್ತಕ ಹಾಗೂ ಮಾರುಕಟ್ಟೆ ಸಿಬ್ಬಂದಿ ಎಲ್ಲರಿಗೂ ಸಮಯದ ಉಳಿತಾಯವಾಗಿದೆ. ಉಳಿತಾಯದ ಸಮಯ ಕೆಲವು ಮಾರುಕಟ್ಟೆಗಳಲ್ಲಿ 6–8 ಗಂಟೆಗಳಾಗಿರುತ್ತದೆ. ರಾಯಚೂರಿನ ಎ.ಪಿ.ಎಂ.ಸಿ. ಯಲ್ಲಿ ಮೊದಲಿನ ವ್ಯವಸ್ಥೆಯಲ್ಲಿ ಬೆಲೆ ನಿಷ್ಕರ್ಷೆ ಮಧ್ಯರಾತ್ರಿ ಕಳೆದರೂ ಸಂಪೂರ್ಣವಾಗದಿದ್ದುದು ಹೊಸ ವ್ಯವಸ್ಥೆಯಿಂದ ಮದ್ಯಾಹ್ನವೇ ಏರ್ಪಟ್ಟು ಸಂಬಂಧ ಪಟ್ಟ ಎಲ್ಲರೂ ತ್ವರಿತ ಕೆಲಸ ಮಾಡುವಂತಾಗಿದೆ. ಈ ವ್ಯವಸ್ಥೆ ಅಳವಡಿಸುವ ಮೊದಲು ಆಕ್ಷೇಪ ವ್ಯಕ್ತ ಪಡಿಸಿದ ವರ್ತಕರು ಹಾಗೂ ದಲ್ಲಾಳರು ನಂತರದಲ್ಲಿ ಉಳಿದ ಉತ್ಪನ್ನಗಳಿಗೂ ಈ ವ್ಯವಸ್ಥೆಯನ್ನೇ ಜಾರಿಗೊಳಿಸಬೇಕೆಂದು ಕೋರಿಕೆ ಸಲ್ಲಿಸಿರುವುದು ಸಮಯ ಉಳಿತಾಯದ ಹಾಗೂ ವ್ಯವಸ್ಥೆಯ ಪಾರದರ್ಶಕತೆಗೆ ಹಿಡಿದ ಕನ್ನಡಿಯಾಗಿದೆ. ಮೊದಲಿನ ವ್ಯವಸ್ಥೆಯಲ್ಲಿ ಬೆಲೆ ನಮೂದಿಸುವಲ್ಲಿ, ಅದನ್ನು ಮಾರುಕಟ್ಟೆ ಸಿಬ್ಬಂದಿ ಹೆಚ್ಚು ಬೆಲೆ ನಮೂದಿಸಿದವರನ್ನು ಕಂಡುಹಿಡಿಯುವಾಗ ಆಗುತ್ತಿದ್ದ ಲೋಪದೋಷಗಳು ಮತ್ತು ಅವ್ಯವಹಾರಗಳು ಪ್ರಸ್ತುತ ವ್ಯವಸ್ಥೆಯಲ್ಲಿ ನಡೆಯಲು ಅವಕಾಶವಿರುವುದಿಲ್ಲ. ಈ ಎರಡನೆಯ ಅನುಕೂಲವಾದ ಪಾರದರ್ಶಕತೆಯಿಂದ ರೈತರಿಗೆ ಅನ್ಯಾಯವಾಗುವುದು ತಡೆಯಬಹುದಲ್ಲದೆ, ಸಣ್ಣ ವರ್ತಕರಿಗೆ ದೊಡ್ಡ ವರ್ತಕರು ಮಾಡಬಹುದಾದ ಅವ್ಯವಹಾರಗಳಿಗೂ ಕಡಿವಾಣ ಬಿದ್ದಂತಾಗಿದೆ.

ಮೇಲ್ನೋಟಕ್ಕೆ ಸಾಬೀತಾದಂತೆ, ರೈತರ ಹಾಗೂ ಮಾರುಕಟ್ಟೆ ಸಿಬ್ಬಂದಿಯವರ ಅಭಿಮತದಂತೆ ಕೃಷಿ ಉತ್ಪನ್ನದ ಬೆಲೆಯಲ್ಲಿ ಕೊಂಚ ಮಟ್ಟದ ಏರಿಕೆ ಕಂಡುಬಂದಿದೆ. ಇದು ನಿಜವೇ ಎಂಬುದನ್ನು ಇನ್ನೂ ಸ್ಪಷ್ಟಗೊಳಿಸಬೇಕಾಗಿದೆ. ವ್ಯವಸ್ಥೆಯಲ್ಲಿನ ಪಾರದರ್ಶಕತೆಯು ಈ ಒಂದು ಸಾಧ್ಯತೆಯನ್ನು ನಂಬಲರ್ಹಗೊಳಿಸಿದೆ.

ಇನ್ನು ಈ ವ್ಯವಸ್ಥೆಯಲ್ಲಿರುವ ಲೋಪಗಳೇನು? ಹಳೆ ವ್ಯವಸ್ಥೆಯಲ್ಲಿದ್ದ ಹಲವು ಲೋಪಗಳು ಗೊತ್ತಾಗದ ಹಾಗೂ ಸ್ಪಷ್ಟವಾಗಿ ಕಾಣುವ ಹಾಗೆ ಹೊಸ ವ್ಯವಸ್ಥೆಯಲ್ಲಿಯೂ ಉಳಿದುಕೊಂಡಿದೆ. ಅವುಗಳೆಂದರೆ, ಪ್ರಥಮವಾಗಿ, ಕೃಷಿ ಉತ್ಪನ್ನ ಮಾರುಕಟ್ಟೆಯೊಳಗೆ ಬರುವಾಗಲೇ ಅದು ಗೇಟ್ ಎಂಟ್ರಿ (ಒಳಬರುವ ಉತ್ಪನ್ನ, ಉತ್ಪಾದಕ, ಪರಿಮಾಣ, ರೈತರ ಹೆಸರು, ಸ್ಥಳ, ದಲ್ಲಾಲಿ, ಇತರೆ ಮಾಹಿತಿ ನಮೂದಿಸುವುದು) ಕಡ್ಡಾಯ. ಆದರೆ, ಇದನ್ನು ಇ–ಟೆಂಡರ್ ಅನುಷ್ಠಾನಗೊಳಿಸಿರುವ ಸಾಕಷ್ಟು ಮಾರುಕಟ್ಟೆಗಳಲ್ಲಿ ಹಲವು ವರ್ಷಗಳಾದರೂ ನಡೆಸುತ್ತಿಲ್ಲ. ಇದರಿಂದ, ಉತ್ಪನ್ನಗಳ ಆವಕ ಮತ್ತು ನಿರ್ಗಮನದಲ್ಲಿರುವ ವ್ಯತ್ಯಾಸ ತಿಳಿಯುವುದೇ ಇಲ್ಲ. ಇದರಿಂದ ಮಾರುಕಟ್ಟೆ ಶುಲ್ಕ ಸಮರ್ಪಕವಾಗಿ ಪಾವತಿಯಾಗುವುದಿಲ್ಲ. ಹೀಗೆ ಮಾಹಿತಿ ನಮೂದಾಗದಿದ್ದಾಗ ದಲ್ಲಾಲರೇ ಮಾಹಿತಿಯನ್ನು ಮಾರುಕಟ್ಟೆ ಸಿಬ್ಬಂದಿಗೆ ನೀಡುವುದರಿಂದ ತಪ್ಪು ಮಾಹಿತಿ ಕೊಡುವ ಸಾಧ್ಯತೆಯೇ ಹೆಚ್ಚು. ತಪ್ಪು ಮಾಹಿತಿ ಕೊಡುವುದರಿಂದ ಅವರು ರೈತರಿಗೆ ಕೊಡಬೇಕಾದ ಮೊತ್ತದಲ್ಲಿ ಏರುಪೇರು ಮಾಡಿ ರಸೀದಿ ಕೊಡಬಹುದಾಗಿರುತ್ತದೆ. ಇದರಿಂದ ಬಿಳಿಚೀಟಿ ವ್ಯವಹಾರ ಹೆಚ್ಚಾಗುತ್ತದೆ. ಅಲ್ಲದೆ ರೈತರಿಂದ ವಸೂಲಿ ಮಾಡುವ ಕಮಿಷನ್ ವ್ಯವಹಾರವೂ ಅಡೆತಡೆಯಿಲ್ಲದೆ ನಡೆಯುತ್ತದೆ.

ಈ ವ್ಯವಸ್ಥೆಯಿಂದ ಸ್ವಲ್ಪ ಹೆಚ್ಚಿನ ಶ್ರಮ ಹೊಂದುತ್ತಿರುವುರೆಂದರೆ, ವರ್ತಕರು. ಅವರು ಉತ್ಪನ್ನಗಳ ಲಾಟ್‌ಗಳನ್ನು ಪರಿಶೀಲಿಸಿದ ಮೇಲೆ ಒಮ್ಮೆ ತಮ್ಮ ಬೆಲೆ (ಕೊಟೇಷನ್)ಯನ್ನು ಚೀಟಿಯಲ್ಲಿ ನಮೂದಿಸಿ, ನಂತರ ಎಲ್ಲ ಸರಕುಗಳಿಗೆ ತಮ್ಮ ಬೆಲೆಯನ್ನು ಕಂಪ್ಯೂಟರ್‌ನಲ್ಲಿ ಹಾಕಬೇಕಾದುದರಿಂದ ಸಮಯ ಮತ್ತು ಶ್ರಮ ಅಧಿಕವಾಗುತ್ತದೆ. ಆವಕ ಅಧಿಕವಿರುವ ದಿನಗಳಲ್ಲಿ ಹಲವಾರು ಸಲ ಕಂಪ್ಯೂಟರ್‌ಗಳಿಗೆ ಸರತಿ ಸಾಲಿನಲ್ಲಿ ನಿಲ್ಲುವ ಪ್ರಕರಣಗಳೂ ನಡೆದಿರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಸಂಬಂಧಪಟ್ಟವರು ಸ್ವಲ್ಪ ಹೆಚ್ಚಿನ ಸಂಖ್ಯೆಯ ಕಂಪ್ಯೂಟರ್‌ಗಳು ಮತ್ತು ಇನ್ನು ಆಧುನಿಕ ಬೆಲೆ ನಮೂದಿಸುವ ಮಾಹಿತಿ ತಂತ್ರಜ್ಞಾನ ಉಪಕರಣಗಳನ್ನು ಅಳವಡಿಸುವ ಅಗತ್ಯವಿರುತ್ತದೆ.

ಪ್ರಸ್ತುತ, ಇ–ಟೆಂಡರ್ ವ್ಯವಸ್ಥೆಯಲ್ಲಿನ ಯಶಸ್ಸಿನ ಆಧಾರದಲ್ಲಿ ಆನ್‌ಲೈನ್ ಮಾರಾಟ ಏರ್ಪಡಿಸುವಲ್ಲಿ ರಾಜ್ಯ ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಹೀಗಾದಾಗ ರಾಜ್ಯದ ಯಾವುದೇ ಮಾರಕಟ್ಟೆಯಲ್ಲಿರುವ ವರ್ತಕ ರಾಜ್ಯದ ಇನ್ನಾವುದೇ ಮಾರುಕಟ್ಟೆಯಲ್ಲಿರುವ ಸರಕನ್ನು ಖರೀದಿಸಬಹುದಾಗಿದೆ. ಆದರೆ, ಹಳೆ ವ್ಯವಸ್ಥೆಯನ್ನು ಉನ್ನತ ಮಟ್ಟಕ್ಕೇರಿಸುತ್ತಿರುವ ಸರ್ಕಾರವು ಹಳೆ ವ್ಯವಸ್ಥೆಯಲ್ಲಿರುವ ಹಲವು ದೋಷಗಳನ್ನು ಸರಿಪಡಿಸಬೇಕಾಗಿರುತ್ತದೆ. ಇದರಲ್ಲಿ ನಮ್ಮ ರೈತ ವರ್ಗದ ಜವಾಬ್ದಾರಿಯೂ ಇದೆ. ರೈತರು ಮೇಲೆ ತಿಳಿಸಿರುವ ಮಾರುಕಟ್ಟೆಗೆ ಹೋದಾಗ ಕಡ್ಡಾಯವಾಗಿ, ಗೇಟ್‌ಎಂಟ್ರಿ ಆಗುವುದನ್ನು ಖಾತರಿಪಡಿಸಿಕೊಳ್ಳಲೆಬೇಕಾಗಿದೆ.

ಕೃಷಿ ಮಾರಾಟದಲ್ಲಿ ಮಾಹಿತಿ ತಂತ್ರಜ್ಞಾನದ ಪ್ರಯೋಜನ ರೈತಬಾಂಧವರಿಗೂ ಲಭ್ಯವಾಗುತ್ತಿರುವುದು ಅತ್ಯಂತ ಸಂತೋಷಕರವಾದ ವಿಚಾರವಾಗಿದೆ. ಇ–ಟೆಂಡರ್ ಕೇವಲ ಆಹಾರಧಾನ್ಯಗಳು, ಎಣ್ಣೆಕಾಳು ಮತ್ತು ಹೊಲದ (ಬೇಗನೆ ಹಾಳಾಗದ) ಬೆಳೆಗಳಿಗೆ ಮಾತ್ರ ಏರ್ಪಟ್ಟಿರುವುದರಿಂದ ತೋಟಗಾರಿಕೆ ಬೆಳೆಗಳು (ಮುಖ್ಯವಾಗಿ ಹಣ್ಣು, ತರಕಾರಿ ಇತ್ಯಾದಿ) ಇದರ ಸೌಲಭ್ಯದಿಂದ ವಂಚಿತವಾಗಿದೆ. ಇ–ಟೆಂಡರ್‌ನಂತೆ ಇ–ಆಕ್ಷನ್ ಏರ್ಪಟ್ಟರೆ ತೋಟಗಾರಿಕೆ ಬೆಳೆಗಳ ಮಾರಾಟದಲ್ಲೂ ಮಾಹಿತಿ ತಂತ್ರಜ್ಞಾನ ಅಳವಡಿಕೆಯ ಲಾಭ ಸಿಗುತ್ತದೆ.